# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ.1770/2021

ದಿನಾಂಕ :06.08.2022.

| | | |
|---|---|---|
| ಹೆಸರು | : ರುದ್ರಮುನಿ | ಸಿಡಬ್ಲ್ಯೂ - 03 |
| ತಂದೆ ಹೆಸರು | : ತಿಪ್ಪಯ್ಯ | ಪಿ ಡಬ್ಲ್ಯೂ - 02 |
| ವಯಸ್ಸು | : 39 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸಸ್ಥಳ | : ಮಲ್ಲೂರಹಳ್ಳಿ ಗ್ರಾಮ | ಪ್ರಮಾಣ ವಚನ ಬೋಧಿಸಲಾಯಿತು. |

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ರವರಿಂದಃ

ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇರುತ್ತದೆ. ಆತನು ನನ್ನ ಪಕ್ಕದ ಮನೆಯವನು. ಚಾಸಾ-1,2,5 ಮತ್ತು 6 ರವರು ಸಹ ನನ್ನ ಮನೆಯ ಪಕ್ಕದವರು. ಚಾಸಾ-4 ನನ್ನ ಅಕ್ಕನ ಗಂಡನಾಗಬೇಕು.

ದಿನಾಂಕ.15.04.2021 ರಂದು ನನ್ನ ಮನೆಯ ಮುಂದೆ ಚಾಸಾ-1 ನಿಂತಿಕೊಂಡಿದ್ದು, ಆಗ ಏಕಾಏಕಿ ಬಂದು ಜಗಳ ತೆಗೆದನು. ನಂತರ ಆರೋಪಿ ಮನೆಗೆ ಹೋಗಿ ತನ್ನ ಅಣ್ಣ ರಾಜಣ್ಣನನ್ನು ಕರೆದುಕೊಂಡು ಹೋದನು. ನಂತರ ಆರೋಪಿತನು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಎದೆಯ ಬಲಭಾಗಕ್ಕೆ ಹೊಡೆದಿರುತ್ತಾನೆ. ನಂತರ ಆಂಬ್ಯುಲೆನ್ಸ್ ಕರೆಸಿ ಚಾಸಾ-1 ಮತ್ತು ಹೆಂಡತಿ ಚಾಸಾ-2 ರವರ ಜೊತೆಗೆ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ನಂತರ ಪೊಲೀಸರು ಬಂದಿರುತ್ತಾರೆ. ಗಲಾಟೆ ನಡೆದಾಗ 7.45 ರಿಂದ 8.00 ಗಂಟೆ ಆಗಿತ್ತು. ಪೊಲೀಸರು ಬಂದಾಗ ಸಾಯಂಕಾಲ 4.45 ರಿಂದ 5.00 ಗಂಟೆ ಆಗಿತ್ತು.

ಪೊಲೀಸರು ನನ್ನನ್ನು ಗಲಾಟೆ ಕುರಿತು ವಿಚಾರಿಸಿ ನನ್ನ ಸಮಕ್ಷಮ ಮಹಜರ್ ನ್ನು ಜರುಗಿಸಿರುತ್ತಾರೆ. ಗಲಾಟೆ ಜಾಗವನ್ನು ನಾನು ಮತ್ತು ಚಾಸಾ-7 ತೋರಿಸಿರುತ್ತೇವೆ. ಮಹಜರ್ ಗೆ ನಾನು ಮತ್ತು ಚಾಸಾ-7 ಸಹಿ ಮಾಡಿರುತ್ತೇವೆ. ಮಹಜರ್ ನ್ನು 5.00 ಗಂಟೆಯಿಂದ 5.45 ಗಂಟೆವರೆಗೆ ಜರುಗಿಸಿರುತ್ತಾರೆ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ಈಗಾಗಲೇ ನಿ.ಪಿ.2 ಅಂತ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಅಂತ ಗುರುತಿಸಲಾಯಿತು.ಗಲಾಟೆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ಮಹಜರ್ ಜರುಗಿಸುವ ಸಮಯದಲ್ಲಿ ಪೊಲೀಸರು ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಕಲ್ಲನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಓ.1 ಅಂತ ಗುರುತಿಸಲಾಯಿತು.

ದಿನಾಂಕ.15.04.2021 ರಂದು ಬೆಳ್ಳಗ್ಗೆ 7.00 ಗಂಟೆಗೆ ಜಗಳ ಆಗಿರುತ್ತದೆ ಎಂದರೆ ಸಾಕ್ಷಿಯು 7.00 ಗಂಟೆ ನಂತರ ಆಗಿರುತ್ತದೆ ಹೆಚ್ಚು ಕಡಿಮೆ 7.00 ಗಂಟೆ ಆಗಿರಬಹುದು ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ-1 ರವರನ್ನು ಅಡ್ಡಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾನೆ ಎಂದರೆ ಸರಿ. ಆಗ ನಾನು, ಚಾಸಾ4 ಮತ್ತು 5 ಜಗಳ ಬಿಡಿಸಿರುತ್ತೇವೆ ಎಂದರೆ ಸರಿ. ಘಟನಾ ಜಾಗವನ್ನು ಚಾಸಾ-7 ರವರು ತೋರಿಸಿದರು ಎಂದರೆ ಸರಿ. ಚಾಸಾ-7 ರವರೇ ಪೊಲೀಸರಿಗೆ ಕಲ್ಲನ್ನು ಕೊಟ್ಟರು ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಟಿ.ಟಿ., ಆರೋಪಿ ಪರ ವಕೀಲರಿಂದ :**

ನಾನು ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೂ, ಚಾಸಾ-1 ಮತ್ತು ಆರೋಪಿಗೂ ಹಿಂದಿನಿಂದಲೂ ದ್ವೇಷ ಇರುತ್ತದೆ ಎಂದರೆ ಸಾಕ್ಷಿಯು ಮುಂದುವರೆದು ನಮ್ಮ ಹೊಲದಲ್ಲಿ ಕಳ್ಳತನ ಆಗಿತ್ತು ಸದರಿ ವಿಚಾರವಾಗಿ ಜಗಳ ಆಗಿತ್ತು ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ-1 ವಿಶ್ವಾಸದಿಂದ ಇದ್ದೇವೆ ಎಂದರೆ ಸಾಕ್ಷಿಯು ಎಲ್ಲರ ಜೊತೆ ವಿಶ್ವಾಸದಿಂದ ಇದ್ದೇನೆ ಎಂದು ನುಡಿಯುತ್ತಾರೆ.

ನನ್ನ ಮುಂದೆ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮನೆಯ ಪಕ್ಕದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಜಗಳ ಆಯಿತು ಅನ್ನುವ ಸಮಯದಲ್ಲಿ ನಾನು ಮನೆಯ ಒಳಗೆ ಇದ್ದೇನಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ಮನೆಯ ಒಳಗಡೆ ಇದ್ದಾಗ ರಸ್ತೆಯಲ್ಲಿ ಏನು ಆಗುತ್ತದೆ ಅಂತ ಕಾಣುವುದಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ಗಲಾಟೆ ಶಬ್ದ ಕೇಳಿ ನಾನು ಹೊರಗಡೆ ಹೋಗಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮನೆಯ ಒಳಗಡೆ ಇದ್ದಾಗೆ ಹೊರಗಡೆ ಏನು ನಡೆಯುತ್ತದೆ ಅಂತ ಕಾಣುವುದಿಲ್ಲ ಎಂದರೆ ಸಾಕ್ಷಿಯು ಶಬ್ದ ಕೇಳಿ ಹೊರಗಡೆ ಹೋಗಿ ಜಗಳವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ಆ ದಿನ ನನಗೆ ಗಲಾಟೆ ಶಬ್ದ ಕೇಳಿಲ್ಲ ಮತ್ತು ನಾನು ಗಲಾಟೆಯನ್ನು ನೋಡಿಲ್ಲ, ಆದರೂ ಸಹ ಗಲಾಟೆ ನೋಡಿರುತ್ತೇನೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಯ ಅಕ್ಕ ಪಕ್ಕ 3 ರಿಂದ 4 ಮನೆಗಳು ಇರತ್ತವೆ. ಸದರಿ ಎಲ್ಲ ಮನೆಗಳಲ್ಲಿ ಜನರು ಇರುತ್ತಾರೆ ಎಂದರೆ ಸರಿ.

ಗಲಾಟೆ ನಡೆದ 5-6 ನಿಮಿಷದಲ್ಲಿ ಮನೆಗೆ ಹೋಗಿ ರಾಜಣ್ಣನನ್ನು ಕರೆದುಕೊಂಡು ಬಂದಿರುತ್ತಾನೆ. ಆರೋಪಿ ಮನೆಯು ಗಲಾಟೆ ಆಗಿದೆ ಅನ್ನುವ ಜಾಗದಿಂದ ಸುಮಾರು 1 ಕಿ.ಮೀ ದೂರ ಆಗುತ್ತದೆ ಎಂದರೆ ಸರಿ. 1 ಕಿ.ಮೀ ನಡೆದುಕೊಂಡು ಹೋಗಲು ಸುಮಾರು 40 ರಿಂದ 45 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿಯು ಬೈಕಿನಿಂದ ಬಂದಿದ್ದ ಎಂದು ನುಡಿಯುತ್ತಾರೆ. ಆರೋಪಿಯು ಬಂದಿದ್ದ ಬೈಕಿನ ನೋಂದಾಣಿ ಸಂಖ್ಯೆಯನ್ನು ಹೇಳಲು ಬರುವುದಿಲ್ಲ. ಸದರಿ ಬೈಕ್ ಯಾರಿಗೆ ಸೇರಿತ್ತು ಅಂತ ನನಗೆ ಗೊತ್ತಿಲ್ಲ. ಬೈಕಿನಲ್ಲಿ 1 ಕಿ.ಮೀ ಹೋಗಿ ಬರಲು 20 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿಯು ಅವರ ಮಾವನ ಮನೆಯಿಂದ ಆ ದಿನ ಬಂದಿದ್ದ ಎಂದು ನುಡಿಯುತ್ತಾರೆ.

ಆರೋಪಿಯು ಚಾಸಾ-1 ರವರ ಎದೆಯ ಬಲಭಾಗಕ್ಕೆ ಎಂ.ಓ.1 ಕಲ್ಲಿನಿಂದ ಹೊಡೆದ ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆಗ ನಾನು, ಚಾಸಾ-4 ಮತ್ತು 5 ರವರು ಗಲಾಟೆಯನ್ನು ಬಿಡಿಸಿರುತ್ತೇವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇವೆ ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಆಂಬ್ಯುಲೆನ್ಸ್ ಗೆ ಬೇರೆಯವರಿಂದ ಕರೆ ಮಾಡಿಸಿದ್ದೇವು. ಆಂಬ್ಯುಲೆನ್ಸ್ ಗೆ ಕರೆ ಮಾಡಿ ಚಾಸಾ-1 ರವರನ್ನು ಚಿಕಿತ್ಸೆಗಾಗಿ ಕಳುಸಿಕೊಟ್ಟ ಬಗ್ಗೆ ನಾನು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆಯನ್ನು ಗಲಾಟೆ ಜಾಗದಲ್ಲಿ ಕೊಟ್ಟಿರುತ್ತೇನೆ ಆದರೆ ಆ ದಿನ ಬಂದ ಪೊಲೀಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ಪೊಲೀಸರಿಗೆ ಕೊಟ್ಟ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಆ ದಿನ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮಹಜರ್ ಗೆ ಸಹಕರಿಸಲು ಪೊಲೀಸರು ನನಗೆ ನೋಟೀಸ್ ಕೊಟ್ಟಿಲ್ಲ ಸಾಕ್ಷಿಯು ಮುಂದುವರೆದು ಪೊಲೀಸರೇ ನೇರವಾಗಿ ಗಲಾಟೆ ಜಾಗಕ್ಕೆ ಬಂದಿದ್ದರು ಅಲ್ಲಿ ಅವರಿಗೆ ವಿಷಯವನ್ನು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ದಿನ ಇಬ್ಬರು ಪೊಲೀಸ್ ಅಧಿಕಾರಿಗಳು ಬಂದಿದ್ದು, ಅವರ ಹೆಸರು ಹೇಳಲು ನನಗೆ ಬರುವುದಿಲ್ಲ. ಮಹಜರ್ ಜಾಗದ ಚೆಕ್ಕುಬಂಧಿಯನ್ನು ನಾನು ಹೇಳಬಲ್ಲೆ. ಉತ್ತರಕ್ಕೆ ನನ್ನ ಜಮೀನು, ಪೂರ್ವಕ್ಕೆ ನನ್ನ ಚಿಕ್ಕಪ್ಪನ ಮನೆ, ಪಶ್ಚಿಮಕ್ಕೆ ನನ್ನ ಮನೆ, ದಕ್ಷಿಣಕ್ಕೆ ದಾರಿ ಎಂದು ನುಡಿಯುತ್ತಾರೆ. ಮಹಜರ್ ಮಾಡುವ ಸಮಯದಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ಸುಮಾರು 3-4 ಜನರು ಇದ್ದರು ಎಂದು ನುಡಿಯುತ್ತಾರೆ. ಆ ದಿನ ನನ್ನ ಸಮಕ್ಷಮ ಮಹಜರ್ ಮಾಡಿಲ್ಲ ಮತ್ತು ಅಲ್ಲಿಂದ ಯಾವುದೇ ಮುದ್ದೆಮಾಲನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಎಂ.ಓ.1 ರಂತ ಕಲ್ಲು ಹಳ್ಳಿಯಲ್ಲಿ ಸಾಕಷ್ಟು ಇರುತ್ತವೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ನಡುವೆ ದ್ವೇಷ ಇರುವುದರಿಂದ ನಾನು ಮತ್ತು ಚಾಸಾ-1 ಷರೀಕ್ ಆಗಿ ಈ ಪ್ರಕರಣವನ್ನು ದಾಖಲಿಸಿ ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.